**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 344/2014**

**ಸಾಕ್ಷಿಗೆ ದಿನಾಂಕ 17.03.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಂ ಶಿವಮಾದಯ್ಯ | ಪಿ.ಡಬ್ಲ್ಯೂ–10 |
| ತಂದೆಯ/ಗಂಡನ ಹೆಸರು | : | ಲೇಟ್ ಮಾದಯ್ಯ | ಸಿ.ಡಬ್ಲ್ಯೂ– 23 |
| ವಯಸ್ಸು | : | 54 | |
| ಉದ್ಯೋಗ | : | ಆರಕ್ಷಕ ವೃತ್ತ ನಿರೀಕ್ಷರು ಕೊಳ್ಳೆಗಾಲ | |
| ವಾಸಸ್ಥಳ | : | ಕೊಳ್ಳೆಗಾಲ | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ದಿನಾಂಕ 12.11.2012 ರಿಂದ 24.10.2014 ರ ವರೆಗೆ ಹಚ್ ಡಿ ಕೋಟೆ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 08.03.2013 ರಂದು ಪ್ರಕರಣದ ಕಡತವನ್ನು ಚಾಸಾ 22 ರವರಿಂದ ಪಡೆದು ತನಿಖೆಯನ್ನು ಮುಂದುವರಿಸಿ ಹೆಚ್ ಡಿ ಕೋಟೆಯಲ್ಲಿರುವ ಗಿರಿಜನ ದೊಡ್ಡ ಪ್ರಮಾಣ ವಿವಿದೊದ್ದೇಶ ಸಹಾಕರ ಸಂಘ ನಿಯಮಿತ ಕಛೇರಿದ ತೆರಳಿ ಪಂಚರುಗಳನ್ನು ಬರಮಾಡಿಕೊಂಡು ಚಾಸಾ 15, 16, 20 ರವರ ಸಮಕ್ಷಮ ಕೆಲವು 9 ಲೆಡ್ಜರ್ ಪುಸ್ತಕಗಳನ್ನು ಅಮನಾತ್ತುಪಡಿಸಿಕೊಂಡು ಬಳಿಗ್ಗೆ 8 ರಿಂದ 5 ಗಂಟೆಯವರೆ ಅಮನಾತ್ತು ಪಂಚನಾಮೆಯನ್ನು ಜರುಗಿಸಲಾಗಿರುತ್ತದೆ. ವಶಪಡಿಸಿಕೊಂಡ ಲೆಡ್ಜರ್ ಪುಸ್ತಕಗಳನ್ನು ಠಾಣಾ ಮಾಲು ಪಟ್ಟಿಸ. 51/2013 ರಂತೆ ತಯಾರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 14, 15, 16 ಮತ್ತು 21 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 12.03.2013

ರಂದು ಸಂಘದ ಕಾರ್ಯದರ್ಶಿಯಾದ ಚಾಸಾ 14 ರವರಿಂದ ಸಂಘದ ಸದಸ್ಯರುಗಳ ನೇಮಕಾತಿಗಳ ಬಗ್ಗೆ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇನೆ. ದಿಃ 25.07.2013 ರಂದು ಆರೋಪಿಯಾದ ಕುಮಾರಸ್ವಾಮಿ ಸಂಘದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ವಿವರವಾದ ಹೇಳಿಕೆಯನ್ನು ಸಹಾಯಕ ಸಹಾಕರ ಸಂಘಗಳ ನಿಭಂದಕರು ಚಾಸಾ 20 ರವರಿಂದ ಪಡೆದುಕೊಂಡಿರುತ್ತೇನೆ ಹಾಗೂ ಹಿರಿಯ ಲೆಕ್ಕ ಪರಿಶೋಧಕರಾದ ಚಾಸಾ 19 ರವರಿಂದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.ದಿಃ 27.08.2013 ರಂದು ಸಾಕ್ಷಿದಾರಾದ ಚಾಸಾ 2 ರಿಂದ 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 30.08.2013 ರಂದು ಚಾಸಾ 14 ರವರಿಂದ ಸಂಘವು ಉಗಮವಾದ ಬಗ್ಗೆ ಹಾಗೂ ಇನ್ನೀತರ ಜರೆಕ್ಸ್ ಪ್ರತಿಗಳನ್ನು ಪಡೆದುಕೊಂಡಿರುತ್ತೇನೆ. ದಿಃ 12.05.2014 ರಂದು ಹೆಚ್ ಡಿ ಕೋಟೆ ಪೋಲೀಸ್ ಠಾಣೆಯಲ್ಲಿ ಚಾಸಾ 14 ರವರು ಹಾಜರುಪಡಿಸಿದ ಸಂಘ ಬೈಲಾ ಪುಸ್ತಕ, ದಾಸ್ತಾನು ಪುಸ್ತಕ, ನಗದು ಪುಸ್ತಕಗಳು, ವಿಚಾರಣಾ ಕಾಲದಲ್ಲಿ ಅದಿಕಾರಿಗಳು ಮತ್ತು ಆಡತಿಳಿ ಮಂಡಳಿಯವರು ನೀಡಿದ ನೋಟೀಸಗಳನ್ನು ಒಟ್ಟು 5 ದಾಖಲಾತಿಗಳನ್ನು ಪಂಚರುಗಳಾದ ಚಾಸಾ 14 ಮತ್ತು 17 ರವರ ಸಮಕ್ಷಮ ಸಂಜೆ 4 ರಿಂದ 5 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಅಮನಾತ್ತುಪಡಿಸಿಕೊಂಡಿರುತ್ತೇನೆ. ಅವುಗಳನ್ನು ಠಾಣೆ ಮಾಲು ಪಟ್ಟಿ ನಂಬರ್ 81/2014 ರಂತೆ ನಮೂದಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿಃ 22.05.2014 ರಂದು ಚಾಸಾ 14 ರವರು ಹೆಚ್ ಡಿ ಕೋಟೆ ಪೋಲೀಸ್ ಠಾಣೆಗೆ ಹಾಜರಾಗಿ ಲ್ಯಾಮ್ ಸೊಸೈಟಿಯ 2007 ನೇ ಸಾಲಿನ ಪಾಸ್ ಪುಸ್ತಕ, ವೋಚರ್ ಬಂಡಲ್ , 38 ಮತ್ತು 39 ನೇ ನಂಬರಿನ ರಸೀದಿ ಪುಸ್ತಕಗಳು ಒಟ್ಟು 4 ದಾಖಲಾತಿಗಳನ್ನು ಚಾಸಾ 14 ಮತ್ತು 17 ರವರ ಸಮಕ್ಷಮ ಮದ್ಯಾಹ್ಣ 2 ರಿಂದ 3 ಗಂಟೆಟಯವರೆಗೆ ಮಹಜರ್ ಮೂಲಕ ಅಮನಾತ್ತುಪಡಿಸಿಕೊಳ್ಳಲಾಗಿರುತ್ತದೆ. ಸದರಿ ದಾಖಲಾತಿಗಳನ್ನು ಠಾಣೆ ಮಾಲು ಪಟ್ಟಿ

ನಂಬರ್ 92/2014 ರಂತೆ ತಯಾರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೆ ದಿನ ಚಾಸಾ 14 ರವರಿಂದ ದಿಃ 18.02.2009 ರ ವೋಚರ್ ನಂಬರ್ 101 ಮತ್ತು 102 ಗಳನ್ನು ವಿಚಾರಣಾ ಕಾಲದಲ್ಲಿ ಘನ ನ್ಯಾಯಾಲಯಕ್ಕೆ ಹಾಜರುಪಡಿಸುವ ಬಗ್ಗೆ ಪತ್ರವನ್ನು ಬರೆದಿರುತ್ತೇನೆ. ದಿಃ 23.05.2014 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ನಿಪಿ 5 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು 5(ಇ) ಎಂದು, ಚಾಸಾ 21 ರವರು ನನ್ನ ನಿರ್ದೇಶನದ ಮೇರೆಗೆ ಸದರಿ ಮಹಜರನ್ನು ಕೈ ಬರಹದಲ್ಲಿ ಬರೆದಿದ್ದು ಅವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ 19 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುರತಿಸಿದ್ದು ಅದನ್ನು 19(ಸಿ) ಎಂದು ಸಾಕ್ಷಿಯು ನಿಪಿ 24 ರ ದಿಃ 22.05.2014 ರಂದು ಆದ ಅಮನಾತ್ತು ಪಂಚಾನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುರತಿಸಿದ್ದು ಅದನ್ನು 24(ಸಿ) ಎಂದು, ಚಾಸಾ 14 ರವರು ನೀಡಿರುವ ಸಂಘದ ಸದಸ್ಯರು ಮತ್ತು ಇತರ ಸದಸ್ಯರು ಯಾವ ಯಾವ ವರ್ಷಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು ಎಂಬ ಬಗ್ಗೆ ಪ್ರಸ್ತುತ ಅಂದಿನ ಕಾರ್ಯಕಾರ್ಶಿಯವರು ನೀಡಿದ್ದ ದಾಖಲಾತಿಯನ್ನು ನಿಪಿ 31 ಎಂದು, ಸಾಕ್ಷಿಯ ಸಹಿಯನ್ನು ನಿಪಿ 31(ಎ) ಎಂದು,ಸಾಕ್ಷಿಯು ಗಿರಿಜನರ ದೊಡ್ಡ ಪ್ರಮಾಣದ ವಿವಿದೋದ್ದೇಶ ಸಹಾಕರ ಸಂಘದ ಉಪ ನಿಮಯಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ 32 ಎಂದು, ಸಾಕ್ಷಿಯ ಸಹಿಯನ್ನು ನಿಪಿ 32(ಎ) ಎಂದು,ಸಹಾಕರ ಸಂಘಗಳ ಉಪ ನಿಂಬಂದಕರು ಮೈಸೂಾರು ಇವರು ನೀಡಿದ ಒಟ್ಟು 9 ಪುಟಗಳ ಆದೇಶದ ಪ್ರತಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ 33 ಎಂದು, ಸಾಕ್ಷಿಯ ಸಹಿಯನ್ನು ನಿಪಿ 33(ಎ) ಎಂದು, ಚಾಸಾ 20 ಗುರುಪ್ರಸಾದ್ ರವರು ಹಾಜರುಪಡಿಸಿರುವ ವಿಚಾರಣಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 34 ಎಂದು, ಸಾಕ್ಷಿಯ ಸಹಿಯನ್ನು

ನಿಪಿ 34(ಎ) ಎಂದು, ಚಾಸಾ 19 ರವರು ಹಿರಿಯ ಲೆಕ್ಕ ಪರಿಶೋಧಕರಾಗಿದ್ದು ಅವರು ತನಿಖಾಧಿಕಾರಿಗಳ ಕೋರಿಕೆಯ ಮೇರೆಗೆ ಲ್ಯಾಂಪ್ ಸೊಸೈಟಿಯ ಆರೋಪಿಗಳು ಕಾರ್ಯ ನಿರ್ವಹಿಸಿದ ಅವಧಿಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಲೆಕ್ಕ ಪರಿಶೋಧನೆ ಮಾಡಿ ಆಡಿಟ್ ವರದಿಯ 13 ಪುಟಗಳ ಲೆಕ್ಕ ಪರಿಶೋಧನ ವರದಿಯನ್ನು ಒಟ್ಟಾಗಿ ನಿಪಿ 35 ಎಂದು, ಸಾಕ್ಷಿಯ ಸಹಿಯನ್ನು ನಿಪಿ 35(ಎ) ಎಂದು, ಸಾಕ್ಷಿಯು ನಿಪಿ 6 ರಿಂದ 18 ರ ದಾಖಲಾತಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ 25 ಪಾಸ್ ಬುಕ್ಕನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ 26 ವೋಚರ್ ಬುಕ್ಕನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ 27 ಮತ್ತು 28 ರಸೀತಿ ಪುಸ್ತಕಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ 20 ಸಂಘದ ಬೈಲಾ ಪುಸ್ತಕವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ 21 ಮತ್ತು 22 ಎರಡು ನಗದು ಪುಸ್ತಕಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ 23 ರ 2008-09 ನೇ ಸಾಲಿನ ದಾಸ್ತಾನು ಪುಸ್ತಕವನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯು 2001-02 ನೇ ಸಾಲಿನಲ್ಲಿ ಸುಮಾರು ರೂ. 2,47,421/-ಗಳನ್ನು ಸ್ವಂತಕ್ಕೆ ಬಳಸಿಕೊಂಡು ದೂರುಪಯೋಗಪಡಿಸಿ ಸಂಘಕ್ಕೆ ಮೋಸ ಮಾಡಿರುವ ಬಗ್ಗೆ ಕಂಡುಬರುತ್ತದೆ.

**ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ